(136)

# ಕರ್ನಾಟಕ ಸರ್ಕಾರ

# ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ
# 2018–19ನೇ ಸಾಲಿನ ವಾರ್ಷಿಕ ವರದಿ


**ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯ,**

**ಬೆಂಗಳೂರು.**

ದೂರವಾಣಿ: 080–22353976, 22258988, 22353974.

ಫ್ಯಾಕ್ಸ್: 22389519,

**email :dtpkar@hotmail.com Website:www.dtpkar.in**

ಕರ್ನಾಟಕ ಸರ್ಕಾರ

ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ 2018–19ನೇ ಸಾಲಿನ ವಾರ್ಷಿಕ ವರದಿ

### 1. ಪೀಠಿಕೆ:

ಇಲಾಖೆಯ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ. ಇಲಾಖೆಯು 2018–19 ನೇ ಸಾಲಿನ ಅವಧಿಯಲ್ಲಿ ಈ ಕೆಳಕಂಡ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯನಿರ್ವಹಿಸಿರುತ್ತದೆ.

1) ಶ್ರೀ ಎಲ್. ಶಶಿಕುಮಾರ್ 28–02–2017 ರಿಂದ 09–05–2018
2) ಶ್ರೀ ಹೆಚ್.ಎಂ. ಮಲ್ಲಿಕಾರ್ಜುನ ಸ್ವಾಮಿ 10–05–2018 ರಿಂದ 31–03–2019

ಈ ಇಲಾಖೆಯ ಒಂದು ವಲಯ ಕಛೇರಿಯು ಧಾರವಾಡದಲ್ಲಿ ಮತ್ತು ಮೂರು ವಿಭಾಗೀಯ ಕಛೇರಿಗಳು, ಬೆಂಗಳೂರು, ಮೈಸೂರು ಹಾಗೂ ಕಲುಬುರಗಿಯಲ್ಲಿದ್ದು, ಧಾರವಾಡ ವಲಯ ಕಛೇರಿಯು ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು ಇವರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಉಳಿದ ಮೂರು ವಿಭಾಗೀಯ ಕಛೇರಿಗಳು ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸಿರುತ್ತದೆ. ಜೊತೆಗೆ ಇಲಾಖೆಯ 30 ಶಾಖಾ ಕಛೇರಿಗಳು ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳನ್ನು ಹೊರತುಪಡಿಸಿ ರಾಜ್ಯದ ಜಿಲ್ಲಾ ಕೇಂದ್ರ ಹಾಗೂ ಇತರ ಪ್ರಮುಖ ತಾಲ್ಲೂಕು ಕೇಂದ್ರಗಳಲ್ಲಿದ್ದು, ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸಿರುತ್ತದೆ.

### 1.1. ಇಲಾಖೆಯ ಕಾರ್ಯಚಟುವಟಿಕೆಗಳು :

ರಾಜ್ಯದ ನಗರ : ಪಟ್ಟಣ ಹಾಗೂ ಗ್ರಾಮಗಳ ಯೋಜಿತ ಬೆಳವಣಿಗೆಗಾಗಿ ಮಹಾ ಯೋಜನೆಗಳನ್ನು ಸಿದ್ದಪಡಿಸಿ, ಈ ಯೋಜನೆಗಳನ್ನು ಜಾರಿಗೊಳಿಸುವುದು ಇಲಾಖೆಯ ಪ್ರಮುಖ ಕಾರ್ಯವಾಗಿರುತ್ತದೆ.

ಇಲಾಖೆಯ ಪ್ರಮುಖ ಚಟುವಟಿಕೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

1. ನಗರ : ಪಟ್ಟಣ ಮತ್ತು ಅಭಿವೃದ್ಧಿ ಪಥದಲ್ಲಿ ಇರುವ ಗ್ರಾಮಗಳ ಭೌತಿಕ, ಸಾಮಾಜಿಕ ಹಾಗೂ ಆರ್ಥಿಕ ಸಮೀಕ್ಷೆ ಮಾಡಿ ಮಹಾಯೋಜನೆ (ಮಾಸ್ಟರ್ ಪ್ಲಾನ್)ಗಳನ್ನು ಸಿದ್ಧಪಡಿಸುವುದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮದಡಿ ಈ ಯೋಜನೆಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಅಂಗೀಕಾರ ಪಡೆಯುವುದು.

2. ಪಟ್ಟಣ ಮತ್ತು ಗ್ರಾಮ ವಿಸ್ತರಣಾ (ಬಡಾವಣೆ) ಯೋಜನೆ : ಅಭಿವೃದ್ಧಿ ಸುಧಾರಣಾ ಯೋಜನೆಗಳು : ಪುನರ್ವಸತಿ ಯೋಜನೆಗಳು : ಆಶ್ರಯ ಯೋಜನೆಗಳು : ಮತ್ತಿತರ ಯೋಜನೆಗಳನ್ನು ತಯಾರಿಸುವುದು.

(134)

3. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ನಿಯಮಗಳನ್ನು ಅನುಷ್ಠಾನಕ್ಕೆ ತರುವ ವಿಷಯದಲ್ಲಿ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿಗೆ ಹಾಗೂ ಯೋಜನೆಗಳನ್ನು ರೂಪಿಸಲು ಮತ್ತು ಕಾರ್ಯಗತಗೊಳಿಸಲು ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮತ್ತು ನಗರ ಯೋಜನಾ ಪ್ರಾಧಿಕಾರಗಳಿಗೆ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ನೆರವು ನೀಡುವುದು.

4. ರಾಜ್ಯ ಸರ್ಕಾರ ರಚಿಸಿರುವ ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ, ಕರ್ನಾಟಕ ಕೊಳಚೆ ನಿರ್ಮೂಲನಾ ಮಂಡಳಿ, ಮತ್ತಿತರ ಸಂಸ್ಥೆಗಳಿಗೆ ಯೋಜನಾ ವಿಷಯಗಳಿಗೆ ಸಂಬಂಧಿಸಿದಂತೆ ನೆರವು ನೀಡುವುದು.

5. ಸರ್ಕಾರಿ ಇಲಾಖೆಗಳು: ಅರೆ ಸರ್ಕಾರಿ ಸಂಸ್ಥೆಗಳು : ಸ್ಥಳೀಯ ಸಂಸ್ಥೆಗಳು ಹಾಗೂ ಖಾಸಗಿ ಸಂಸ್ಥೆಗಳ ಕೋರಿಕೆ ಮೇರೆಗೆ ವಿನ್ಯಾಸ ರೂಪಿಸಿ ತಾಂತ್ರಿಕ ಅನುಮೋದನೆ ನೀಡುವುದು.

6. ವ್ಯವಸಾಯ ಭೂಮಿಯನ್ನು ವ್ಯವಸಾಯೇತರ ಉದ್ದೇಶಗಳಿಗಾಗಿ ಪರಿವರ್ತಿಸಲು ಕಂದಾಯ ಇಲಾಖೆಗೆ ತಾಂತ್ರಿಕ ಅಭಿಪ್ರಾಯ : ನೆರವು ನೀಡುವುದು.

7. ಸುವ್ಯವಸ್ಥಿತ, ಸುರಕ್ಷಿತ ಹಾಗೂ ಸಮರ್ಥ ಸಂಚಾರ ನಿರ್ವಹಣಾ ಯೋಜನೆಗಳನ್ನು ರೂಪಿಸುವುದು ಮತ್ತು ಅವುಗಳನ್ನು ಕಾರ್ಯಗತಗೊಳಿಸಲು ಸಲಹೆ ನೀಡುವುದು.

## 1.2. ಶಾಸನಬದ್ಧ ಕಾರ್ಯಗಳು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ನ್ನು ರಾಜ್ಯದಲ್ಲಿನ 157 ನಗರ : ಪಟ್ಟಣ ಪ್ರದೇಶಗಳಿಗೆ ವಿಸ್ತರಿಸಿ, ಸ್ಥಳೀಯ ಯೋಜನಾ ಪ್ರದೇಶವನ್ನು ಘೋಷಿಸಲಾಗಿದೆ. ಹಾಗೂ ಪ್ರಾಧಿಕಾರವನ್ನು ರಚಿಸಲಾಗಿದೆ. ಅದರಂತೆ ಒಟ್ಟಾರೆ ರಾಜ್ಯದಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಹೊರತುಪಡಿಸಿ 30 ನಗರಾಭಿವೃದ್ಧಿ ಪ್ರಾಧಿಕಾರಗಳು ಮತ್ತು 52 ನಗರ ಯೋಜನಾ ಪ್ರಾಧಿಕಾರಗಳು ಕಾರ್ಯನಿರ್ವಹಿಸಿರುತ್ತಿವೆ ಹಾಗೂ 74 ಪಟ್ಟಣಗಳಿಗೆ ಸಂಬಂಧಿಸಿದಂತೆ ನಗರ ಸಭೆ : ಪುರಸಭೆ : ಪಟ್ಟಣ ಪಂಚಾಯ್ತಿಗಳೇ ನಗರ ಯೋಜನಾ ಪ್ರಾಧಿಕಾರಗಳಾಗಿ ಕಾರ್ಯನಿರ್ವಹಿಸುತ್ತಿವೆ.

### 1.2.1. ನಗರಾಭಿವೃದ್ಧಿ ಪ್ರಾಧಿಕಾರಗಳು:

ರಾಜ್ಯ ಸರ್ಕಾರ ನಗರ : ಪಟ್ಟಣಗಳ ಅಭಿವೃದ್ಧಿಗಾಗಿ ಅಗತ್ಯವಾದ ಮಹಾಯೋಜನೆಗಳನ್ನು ಜಾರಿಗೊಳಿಸಲು ಅವಕಾಶವಾಗುವಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987 ಅಡಿಯಲ್ಲಿ 30 ನಗರ : ಪಟ್ಟಣಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ, 1976 ರ ಅಡಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸಲಾಗಿದೆ. ಈ ಕೆಳಕಂಡ 31 ನಗರ : ಪಟ್ಟಣಗಳಿಗೆ ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ರಚಿಸಲಾಗಿದೆ.

| | | | |
|---|---|---|---|
| 1. | ಬೆಂಗಳೂರು | 17. | ಕೊಪ್ಪಳ |
| 2. | ಬೆಳಗಾವಿ | 18. | ಮಡಿಕೇರಿ |
| 3. | ಬಳ್ಳಾರಿ | 19. | ಮಂಡ್ಯ |
| 4. | ಬೀದರ್ | 20. | ಮಂಗಳೂರು |
| 5. | ವಿಜಯಪುರ | 21. | ಮೈಸೂರು |
| 6. | ಚಾಮರಾಜನಗರ-ರಾಮಸಮುದ್ರ | 22. | ರಾಮನಗರ-ಚನ್ನಪಟ್ಟಣ |
| 7. | ಚಿತ್ರದುರ್ಗ | 23. | ರಾಯಚೂರು |
| 8. | ಚಿಕ್ಕಮಗಳೂರು | 24. | ಶಿವಮೊಗ್ಗ-ಭದ್ರಾವತಿ |
| 9. | ದಾವಣಗೆರೆ-ಹರಿಹರ | 25. | ತುಮಕೂರು |
| 10. | ಗದಗ-ಬೆಟಗೇರಿ | 26. | ಉಡುಪಿ-ಮಲ್ಪೆ |
| 11. | ಕಲಬುರಗಿ | 27. | ಹುಬ್ಬಳ್ಳಿ-ಧಾರವಾಡ |
| 12. | ಹಾಸನ | 28. | ವಿಜಯನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ, ತೋರಣಗಲ್ಲು (VADA) |
| 13. | ಹಾವೇರಿ | 29. | ಹೊಸಪೇಟೆ |
| 14. | ಕಾರವಾರ | 30. | ಚಿಕ್ಕಬಳ್ಳಾಪುರ |
| 15 | ಕೋಲಾರ | 31. | ಯಾದಗಿರಿ |
| 16. | ಕೆ.ಜಿ.ಎಫ್. | | |

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ಈ ಪ್ರಾಧಿಕಾರಗಳು ಯೋಜನಾ ಕಾರ್ಯನಿರ್ವಹಿಸುತ್ತಿದ್ದು, ಆಯಾ ನಗರ : ಪಟ್ಟಣಗಳ ಮಹಾಯೋಜನೆಗಳನ್ನು ಸಿದ್ದಪಡಿಸಿ ಇವುಗಳನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಳ್ಳುತ್ತಿವೆ.

ಇಲಾಖೆಯ ಹೆಚ್ಚುವರಿ ನಿರ್ದೇಶಕರು/ ಜಂಟಿ ನಿರ್ದೇಶಕರು/ ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು ಈ ಕೆಳಕಂಡ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಪೂರ್ಣಾವಧಿ ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ.

1. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು
2. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರ, ಹುಬ್ಬಳ್ಳಿ
3. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು
4. ಮಂಗಳೂರು ನಗರಾಭಿವೃದ್ಧಿ ಪ್ರಾಧಿಕಾರ, ಮಂಗಳೂರು
5. ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ, ತುಮಕೂರು
6. ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ, ಕಲಬುರಗಿ
7. ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ, ಬಳ್ಳಾರಿ
8. ವಿಜಯಪುರ ನಗರಾಭಿವೃದ್ಧಿ ಪ್ರಾಧಿಕಾರ, ವಿಜಯಪುರ
9. ಶಿವಮೊಗ್ಗ ನಗರಾಭಿವೃದ್ಧಿ ಪ್ರಾಧಿಕಾರ, ಶಿವಮೊಗ್ಗ
10. ಉಡುಪಿ ನಗರಾಭಿವೃದ್ಧಿ ಪ್ರಾಧಿಕಾರ, ಉಡುಪಿ
11. ಹಾಸನ ನಗರಾಭಿವೃದ್ಧಿ ಪ್ರಾಧಿಕಾರ, ಹಾಸನ
12. ಕೆ.ಜಿ.ಎಫ್ ನಗರಾಭಿವೃದ್ಧಿ ಪ್ರಾಧಿಕಾರ, ಕೆ.ಜಿ.ಎಫ್

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಕಾಯ್ದೆ, 1976ರ ಅಡಿಯಲ್ಲಿ ಸ್ಥಾಪಿಸಲಾಗಿದ್ದು, ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಬೆಂಗಳೂರು ನಗರದ ಮಹಾಯೋಜನೆಯ ತಯಾರಿಕೆ ಮತ್ತು ಕಾರ್ಯಾನುಷ್ಠಾನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದಾರೆ. ಸರ್ಕಾರದ ಆದೇಶ ಸಂಖ್ಯೆ: ನಅಇ 341 ಬೆಂಅಸೇ 2015, ದಿನಾಂಕ:05-09-2015ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರ ಹುದ್ದೆಯನ್ನು ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಹುದ್ದೆಗೆ ತತ್ಸಮಾನವಾಗಿ ಸೃಜಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ಇಲಾಖೆಯ ನಿರ್ದೇಶಕರ ವೃಂದದ ಅಧಿಕಾರಿಯವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಹುಬ್ಬಳ್ಳಿ-ಧಾರವಾಡ, ಮೈಸೂರು, ಮಂಗಳೂರು, ತುಮಕೂರು, ದಾವಣಗೆರೆ-ಹರಿಹರ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಮತ್ತು ಕೆ.ಜಿಎಫ್, ಉಡುಪಿ, ವಿಜಯಪುರ, ಶಿವಮೊಗ್ಗ-ಭದ್ರಾವತಿ, ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು ಹಾಗೂ ಮಂಡ್ಯ, ಯಾದಗಿರಿ, ಹಾಸನ, ರಾಯಚೂರು ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ನಗರ ಯೋಜಕ ಸದಸ್ಯರಾಗಿ ಕಾರ್ಯನಿರ್ವಹಿಸಿರುತ್ತಾರೆ.

ಇನ್ನುಳಿದ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ಈ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು ಇಲಾಖೆಗೆ ಸಂಬಂಧಿಸಿದ ಕೆಲಸ ಕಾರ್ಯಗಳ ಜೊತೆಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿ ಬರುವ ನಗರಾಭಿವೃದ್ಧಿ ಪ್ರಾಧಿಕಾರಗಳ ಸಮವರ್ತಿ ಪ್ರಭಾರದಲ್ಲಿ ನಗರ ಯೋಜಕ ಸದಸ್ಯರಾಗಿಯೂ ಕೆಲಸ ನಿರ್ವಹಿಸುತ್ತಿದ್ದಾರೆ. ಇಲಾಖೆಯ ಸಹಾಯಕ ನಿರ್ದೇಶಕರುಗಳ ಕಛೇರಿಯ ಸಿಬ್ಬಂದಿ ಸಹ ಈ ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮಹಾಯೋಜನೆಯನ್ನು ರೂಪಿಸಲು ನೆರವು ನೀಡುತ್ತಿದ್ದಾರೆ.

### 1.2.2 ಯೋಜನಾ ಪ್ರಾಧಿಕಾರಗಳು :

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯಡಿ ರಚಿತವಾದ ಯೋಜನಾ ಪ್ರಾಧಿಕಾರಗಳು ಸಂಬಂಧಪಟ್ಟ ನಗರ : ಪಟ್ಟಣಗಳ ಮಹಾಯೋಜನೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸುವಲ್ಲಿ ಕ್ರಮ ಕೈಗೊಳ್ಳುತ್ತಿವೆ. ಪ್ರಸ್ತುತ, ರಾಜ್ಯದಲ್ಲಿ ಈ ಕೆಳಗೆ ನಮೂದಿಸಿರುವ 52 ನಗರ : ಪಟ್ಟಣಗಳಿಗೆ ಯೋಜನಾ ಪ್ರಾಧಿಕಾರಗಳನ್ನು ರಚಿಸಲಾಗಿದೆ.

| | | | |
|---|---|---|---|
| 1. | ಬಾದಾಮಿ | 5. | ಕುಶಾಲನಗರ |
| 2. | ಬಾಗಲಕೋಟೆ | 6. | ಮೂಡಬಿದ್ರೆ |
| 3. | ಬಸವಕಲ್ಯಾಣ | 7. | ಮಾಲೂರು |
| 4. | ಬೆಂಗಳೂರು-ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರ | 8. | ಕುಂದಾಪುರ |
| 9. | ಚಿಂತಾಮಣಿ | 31. | ಚಿತ್ತಾಪುರ |
| 10. | ಗಂಗಾವತಿ | 32. | ಮಳವಳ್ಳಿ |
| 11. | ಗೋಕಾಕ್ | 33. | ಸುರಪುರ |
| 12. | ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ | 34. | STRR |
| 13. | ಜಮಖಂಡಿ | 35. | ಬಂಟ್ವಾಳ |
| 14. | ಕನಕಪುರ | 36. | ಅರಕಲಗೂಡು |
| 15. | ಮಾಗಡಿ | 37. | ವಾಡಿ ಶಹಾಬಾದ್ |
| 16. | ನೆಲಮಂಗಲ | 38. | ಗೌರಿಬಿದನೂರು |
| 17. | ನಿಪ್ಪಾಣಿ | 39. | ಇಳಕಲ್ |
| 18. | ಪುತ್ತೂರು | 40. | ಶಿಡ್ಲಘಟ್ಟ |
| 19. | ರಾಣೆಬೆನ್ನೂರು | 41. | Greater Bangalore ಬಿಡದಿ Smart City |
| 20. | ರಬಕವಿ-ಬನಹಟ್ಟಿ | 42. | ಶಿರಾ |
| 21. | ಶಿರಸಿ | 43. | ತಿಪಟೂರು |
| 22. | ಸಿಂಧನೂರು | 44. | ಅರಸೀಕೆರೆ |
| 23. | ಶಹಾಪುರ | 45. | ಕಾಪು |
| 24. | ಕೆ.ಆರ್.ನಗರ | 46. | ಸೇಡಂ |
| 25. | ಮಾನ್ವಿ | 47. | ಹುಣಸೂರು |
| 26. | ಹಂಪಿ ವಿಶ್ವ ಪರಂಪರೆ ಪ್ರದೇಶ ನಿರ್ವಹಣಾ ಪ್ರಾಧಿಕಾರ | 48. | ಮುಧೋಳ |
| 27. | ಆನೇಕಲ್ | 49. | ರಾಮದುರ್ಗ |
| 28. | ಹೊಸಕೋಟೆ | 50. | ಕುಣಿಗಲ್ |
| 29. | ಬೇಲೂರು-ಹಳೇಬೀಡು | 51. | ಚನ್ನಪಟ್ಟಣ |
| 30. | ಚನ್ನರಾಯಪಟ್ಟಣ | 52. | ದೊಡ್ಡಬಳ್ಳಾಪುರ |

130

ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ನೆಲಮಂಗಲ ಯೋಜನಾ ಪ್ರಾಧಿಕಾರ, ಕನಕಪುರ ಯೋಜನಾ ಪ್ರಾಧಿಕಾರ, ಮಾಗಡಿ ಯೋಜನಾ ಪ್ರಾಧಿಕಾರ, ಹೊಸಕೋಟೆ ಯೋಜನಾ ಪ್ರಾಧಿಕಾರ ಮತ್ತು ಆನೇಕಲ್ ಯೋಜನಾ ಪ್ರಾಧಿಕಾರ, ಇವುಗಳು ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿದ್ದು ಒಳಪಟ್ಟಿದ್ದು, ಪ್ರತಿ ನಿಯೋಜನೆ ಮೇಲೆ ಆಯಾ ಪ್ರಾಧಿಕಾರದಲ್ಲಿರುವ ಈ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಸದಸ್ಯ–ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಪುತ್ತೂರು, ಗೋಕಾಕ್, ಶಿರಾ, ಚಿತ್ತಾಪೂರ ವಾಡಿ–ಶಹಾಬಾದ್ ಮತ್ತು ಮಾಲೂರು ಯೋಜನಾ ಪ್ರಾಧಿಕಾರಗಳ ಸದಸ್ಯ–ಕಾರ್ಯದರ್ಶಿಯಾಗಿ ಸಹಾಯಕ ನಿರ್ದೇಶಕರುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಏರಿಯಾ ಯೋಜನಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಉಳಿದ ಪ್ರಾಧಿಕಾರಗಳಲ್ಲಿ ಈ ಇಲಾಖೆಯ ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು ಅವರವರ ವ್ಯಾಪ್ತಿಯಲ್ಲಿ ಬರುವ ನಗರ ಯೋಜನಾ ಪ್ರಾಧಿಕಾರಗಳ ಸದಸ್ಯ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ. ಹಾಗೂ ಈ ನಗರ : ಪಟ್ಟಣಗಳ ಮಹಾಯೋಜನೆಗಳ ತಯಾರಿಕೆ ಮತ್ತು ಅನುಷ್ಠಾನಗೊಳಿಸುವ ಕಾರ್ಯವನ್ನು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಶಾಖಾ ಕಛೇರಿಗಳ ಮೂಲಕ ನಿರ್ವಹಿಸುತ್ತಿರುತ್ತದೆ.

## 1.2.2. ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆ :

ಸಂವಿಧಾನದ 74ನೇ ತಿದ್ದುಪಡಿ ಕಾಯ್ದೆಯನ್ವಯ ನಗರ ಯೋಜನೆಯು ಸ್ಥಳೀಯ ಸಂಸ್ಥೆಗಳ ಪ್ರಮುಖ ಕರ್ತವ್ಯಗಳಲ್ಲೊಂದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು ಪ್ರಸ್ತುತ ಈ ಕೆಳಕಂಡ 74 ನಗರ ಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳಿಗೆ ವಿಸ್ತರಿಸಿ, ನಗರ ಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳ ವ್ಯಾಪ್ತಿಯನ್ನೇ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಈ ನಗರಸಭೆ : ಪುರಸಭೆ : ಪಟ್ಟಣ ಪಂಚಾಯಿತಿಗಳನ್ನೇ ಯೋಜನಾ ಪ್ರಾಧಿಕಾರವಾಗಿ ಕಾರ್ಯನಿರ್ವಹಿಸಬೇಕೆಂದು ಸರ್ಕಾರವು ಅಧಿಸೂಚನೆ ಹೊರಡಿಸಿದೆ.

| | | | | | |
|---|---|---|---|---|---|
| 1. | ಭಟ್ಕಳ್ | 26. | ಹಾನಗಲ್ | 51. | ಚಿಕ್ಕೋಡಿ |
| 2 | ಭಾಲ್ಕಿ | 27. | ಆಳಂದ | 52. | ಗುಂಡ್ಲುಪೇಟೆ |
| 3. | ಬೀರೂರು | 28. | ಜಗಳೂರು | 53. | ನರಸಿಂಹರಾಜಪುರ |
| 4. | ಬೈಲಹೊಂಗಲ | 29. | ವಿರಾಜಪೇಟೆ | 54. | ಕೊಪ್ಪ |
| 5. | ಚಳ್ಳಕೆರೆ | 30. | ಕಡೂರು | 55. | ಸುಳ್ಯ |
| 6. | ಚಿಟಗುಪ್ಪ | 31. | ಸವದತ್ತಿ | 56. | ರೋಣ |
| 7. | ತರೀಕೆರೆ | 32. | ಬೀಳಗಿ | 57. | ಹಳಿಯಾಳ |
| 8. | ಬಾಗೇಪಲ್ಲಿ | 33. | ಶಿಕಾರಿಪುರ | 58. | ಹೊನ್ನಾವರ |
| 9. | ಗುಳೇದಗುಡ್ಡ | 34. | ಮುಳಬಾಗಿಲು | 59. | ಸಿದ್ದಾಪುರ |
| 10. | ಸಿರಗುಪ್ಪ | 35. | ನರಗುಂದ | 60. | ಕುಷ್ಟಗಿ |
| 11. | ಹುನಗುಂದ | 36. | ನವಲಗುಂದ | 61. | ತೇರದಾಳ |
| 12. | ಕಂಪ್ಲಿ | 37. | ಸಿಂಧಗಿ | 62. | ಬೆಳ್ತಂಗಡಿ |
| 13. | ಕೊಳ್ಳೇಗಾಲ | 38. | ಸವಣೂರು | 63. | ದಾಂಡೇಲಿ |
| 14. | ಕುಮಟ | 39. | ಶಿರಹಟ್ಟಿ | 64. | ಕೆರೂರು |
| 15. | ಲಕ್ಷ್ಮೇಶ್ವರ | 40. | ತಾಳಿಕೋಟೆ | 65. | ಕಾರ್ಕಳ |
| 16. | ಮಧುಗಿರಿ | 41. | ಬಸವನ–ಬಾಗೇವಾಡಿ | 66. | ಕಿತ್ತೂರು |
| 17. | ಮಹಾಲಿಂಗಪುರ | 42. | ಹೊಳಲ್ಕೆರೆ | 67. | ಕೊರಟಗೆರೆ |
| 18. | ಯಲಬುರ್ಗಾ | 43. | ಹೊಸದುರ್ಗ | 68. | ಮಲೇಬೆನ್ನೂರು |
| 19. | ಶ್ರೀರಂಗಪಟ್ಟಣ | 44. | ಹೊನ್ನಾಳಿ | 69. | ತುರುವೇಕೆರೆ |
| 20. | ಟಿ. ನರಸೀಪುರ | 45. | ಚನ್ನಗಿರಿ | 70. | ಕಮತಗಿ |
| 21. | ಹರಪನಹಳ್ಳಿ | 46. | ಪಾವಗಡ | 71. | ಪಿರಿಯಾಪಟ್ಟಣ |
| 22. | ಹಿರಿಯೂರು | 47. | ಚಿಕ್ಕನಾಯ್ಕನಹಳ್ಳಿ | 72 | ಕುಂದಗೋಳ |
| 23. | ಹೊಳೆನರಸೀಪುರ | 48. | ಮೂಡಲಗಿ | 73. | ಇಂಡಿ |
| 24. | ಹುಮ್ನಾಬಾದ್ | 49. | ಸಕಲೇಶಪುರ | 74. | ಮುದ್ದೇಬಿಹಾಳ |
| 25. | ಸಾಗರ | 50. | ಔರಾದ | | |

ಮೇಲ್ಕಂಡ ನಗರ : ಪಟ್ಟಣಗಳ ಮಹಾಯೋಜನೆಗಳ ತಯಾರಿಕೆ ಮತ್ತು ಕಾರ್ಯಾನುಷ್ಠಾನದಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಅಗತ್ಯ ತಾಂತ್ರಿಕ ಸಿಬ್ಬಂದಿ ನೆರವಿನಿಂದ ಯೋಜನೆ ಮತ್ತು ಅಭಿವೃದ್ಧಿ ಚಟುವಟಿಕೆಗಳ ಸಂಬಂಧದ ಕಾರ್ಯಗಳನ್ನು ನಿರ್ವಹಿಸುತ್ತಿದ್ದಾರೆ.

128

## 2.0 : ಆಡಳಿತ :

ಕೇಂದ್ರ ಕಛೇರಿಯಲ್ಲಿ ಇಲಾಖಾ ಮುಖ್ಯಸ್ಥರಾದ ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು, ಇಬ್ಬರು ನಗರ ಮತ್ತು ಗ್ರಾಮಾಂತರ ಯೋಜನಾ ಉಪ ನಿರ್ದೇಶಕರು, ನಾಲ್ಕು ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರು ಮತ್ತು ವಿವಿಧ ವೃಂದದ ತಾಂತ್ರಿಕ ಸಿಬ್ಬಂದಿ ನೆರವಿನಿಂದ ಯೋಜನೆ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಮಾರ್ಗದರ್ಶನ ನೀಡುವ ಕೆಲಸ ನಿರ್ವಹಿಸುತ್ತಿದ್ದಾರೆ. ಆಡಳಿತಾತ್ಮಕ ಕಾರ್ಯದಲ್ಲಿ ಪತ್ರಾಂಕಿತ ವ್ಯವಸ್ಥಾಪಕರು ಮತ್ತು ಲೆಕ್ಕಾಧೀಕ್ಷಕರು, ಆಡಳಿತ ಮತ್ತು ಲೆಕ್ಕ ವಿಭಾಗದ ಸಿಬ್ಬಂದಿ ವರ್ಗದವರೊಂದಿಗೆ ನಿರ್ದೇಶಕರಿಗೆ ನೆರವಾಗುತ್ತಿದ್ದಾರೆ.

ವಲಯ, ವಿಭಾಗೀಯ ಮತ್ತು ಜಿಲ್ಲಾಮಟ್ಟದಲ್ಲಿ ಕ್ರಮವಾಗಿ ಒಬ್ಬರು ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, 3 ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರುಗಳು ಮತ್ತು 30 ನಗರ ಮತ್ತು ಗ್ರಾಮಾಂತರ ಯೋಜನಾ ಸಹಾಯಕ ನಿರ್ದೇಶಕರುಗಳು ತಮ್ಮ ಸಿಬ್ಬಂದಿ ವರ್ಗದವರೊಂದಿಗೆ ಕಾರ್ಯನಿರ್ವಹಿಸುತ್ತಿದ್ದಾರೆ.

ಇಲಾಖೆಯ ಒಂದು ವಲಯ ಕಛೇರಿ, ಧಾರವಾಡದಲ್ಲಿ ಹಾಗೂ ಮೂರು ವಿಭಾಗೀಯ ಕಛೇರಿಗಳು, ಕ್ರಮವಾಗಿ ಧಾರವಾಡ, ಕಲಬುರಗಿ, ಮೈಸೂರು ಮತ್ತು ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿವೆ. ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ನಗರ ಮತ್ತು ಗ್ರಾಮಾಂತರ ಯೋಜನಾ ಹೆಚ್ಚುವರಿ ನಿರ್ದೇಶಕರು, ಸರ್ಕಾರದ ನಿರ್ದೇಶನದನ್ವಯ ಧಾರವಾಡದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ವಿಭಾಗೀಯ ಮಟ್ಟದಲ್ಲಿ ಜಂಟಿ ನಿರ್ದೇಶಕರು ಮತ್ತು ಜಿಲ್ಲಾ ಮಟ್ಟದಲ್ಲಿ ಸಹಾಯಕ ನಿರ್ದೇಶಕರುಗಳು ಅವರ ವ್ಯಾಪ್ತಿಗೆ ಸಂಬಂಧಿಸಿದ ತಾಂತ್ರಿಕ ಹಾಗೂ ಆಡಳಿತಾತ್ಮಕ ಕೆಲಸಗಳನ್ನು ನಿರ್ವಹಿಸುತ್ತಿರುತ್ತಾರೆ.

## 2.1 ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕಾಯ್ದೆಗಳು:

- ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961
- ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987

## ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯ ಆಡಳಿತ ವ್ಯವಸ್ಥೆ

- ಕರ್ನಾಟಕ ಸರ್ಕಾರ
  - ನಗರಾಭಿವೃದ್ಧಿ ಸಚಿವರು
    - ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ
      - ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ
        - ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು
          - **ಪ್ರಧಾನ ಕಛೇರಿ**: ಜಂಟಿ ನಿರ್ದೇಶಕರು – 1; ಉಪ ನಿರ್ದೇಶಕರು – 2; ಸಹಾಯಕ ನಿರ್ದೇಶಕರು – 4
            - **ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗ**
              - ಸಹಾಯಕ ನಿರ್ದೇಶಕರ ಕಛೇರಿಗಳು
                1. ಕೋಲಾರ
                2. ತುಮಕೂರು
                3. ಚಿತ್ರದುರ್ಗ
                4. ದಾವಣಗೆರೆ
                5. ಶಿವಮೊಗ್ಗ
                6. ಚಿಕ್ಕಬಳ್ಳಾಪುರ
            - **ಜಂಟಿ ನಿರ್ದೇಶಕರು, ಮೈಸೂರು ವಿಭಾಗ**
              - ಸಹಾಯಕ ನಿರ್ದೇಶಕರ ಕಛೇರಿಗಳು
                1. ಮೈಸೂರು
                2. ಮಂಡ್ಯ
                3. ಹಾಸನ
                4. ಚಿಕ್ಕಮಗಳೂರು
                5. ಮಡಿಕೇರಿ
                6. ಮಂಗಳೂರು
                7. ಉಡುಪಿ
                8. ಚಾಮರಾಜನಗರ
            - **ಹೆಚ್ಚುವರಿ ನಿರ್ದೇಶಕರು, ವಲಯ ಕಛೇರಿ, ಧಾರವಾಡ**
              - **ಬೆಳಗಾವಿ ವಿಭಾಗ**
                - ಸಹಾಯಕ ನಿರ್ದೇಶಕರ ಕಛೇರಿಗಳು
                  1. ಬೆಳಗಾವಿ
                  2. ನಿಪ್ಪಾಣಿ
                  3. ಧಾರವಾಡ
                  4. ಗದಗ
                  5. ಹಾವೇರಿ
                  6. ಕಾರವಾರ
                  7. ಸಿರ್ಸಿ
                  8. ವಿಜಯಪುರ
                  9. ಬಾಗಲಕೋಟೆ
                  10. ಜಮಖಂಡಿ
              - **ಜಂಟಿ ನಿರ್ದೇಶಕರು, ಕಲಬುರಗಿ ವಿಭಾಗ**
                - ಸಹಾಯಕ ನಿರ್ದೇಶಕರ ಕಛೇರಿಗಳು
                  1. ಕಲಬುರಗಿ
                  2. ಯಾದಗಿರಿ
                  3. ರಾಯಚೂರು
                  4. ಕೊಪ್ಪಳ
                  5. ಬಳ್ಳಾರಿ
                  6. ಬೀದರ್

## 3.0. ಕಾರ್ಯಕ್ರಮ ಮತ್ತು ಸಾಧನೆ :

### 3.1. ನಗರಾಭಿವೃದ್ಧಿ ಪ್ರಾಧಿಕಾರ, ಯೋಜನಾ ಪ್ರಾಧಿಕಾರ, ನಗರಸಭೆ ಮತ್ತು ಪುರಸಭೆಗಳಿಗೆ ಯೋಜನಾ ವಿಷಯಗಳಲ್ಲಿ ತಾಂತ್ರಿಕ ನೆರವು ನೀಡುವುದು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ನು 157 ನಗರ ಮತ್ತು ಪಟ್ಟಣ ಪ್ರದೇಶಗಳಿಗೆ ಈಗಾಗಲೇ ವಿಸ್ತರಿಸಲಾಗಿದ್ದು, ಉಳಿದ ಪಟ್ಟಣ ಪ್ರದೇಶಗಳನ್ನು ಈ ಉದ್ದೇಶಕ್ಕಾಗಿ ಸ್ಥಳೀಯ ಯೋಜನಾ ಪ್ರದೇಶವೆಂದು ಘೋಷಿಸಿ ಪ್ರತ್ಯೇಕ ಯೋಜನಾ ಪ್ರಾಧಿಕಾರಗಳನ್ನು ರಚಿಸುವ ಬದಲು ಸಂಬಂಧಿಸಿದ ನಗರಸಭೆ: ಪುರಸಭೆ: ಪಟ್ಟಣ ಪಂಚಾಯಿತಿಗಳನ್ನೇ ಯೋಜನಾ ಪ್ರಾಧಿಕಾರಗಳಾಗಿ ರಚಿಸಲು ಸರ್ಕಾರವು ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ ಸ್ಥಳೀಯ ಯೋಜನಾ ಪ್ರದೇಶಗಳಿಗೆ ಮಹಾಯೋಜನೆಗಳನ್ನು ತಯಾರಿಸುವಲ್ಲಿ ಹಾಗೂ ನಕ್ಷೆಯಲ್ಲಿ ಸೂಚಿಸುವ ಪ್ರಸ್ತಾವನೆಗಳನ್ನು ಜಾರಿಗೊಳಿಸುವಲ್ಲಿ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಅಗತ್ಯ ಸಹಕಾರ ನೀಡುತ್ತಿದ್ದು, ಈ ಕ್ರಮವು ಸಂವಿಧಾನದ 74ನೇ ತಿದ್ದುಪಡಿಯ ಉದ್ದೇಶಗಳಿಗೂ ಅನುಗುಣವಾಗಿರುತ್ತದೆ.

### 3.2. ಮಹಾಯೋಜನೆಗಳು (ಮಹಾಯೋಜನೆ ತಾತ್ಕಾಲಿಕ, ಮಹಾಯೋಜನೆ ಅಂತಿಮ, ಮಹಾಯೋಜನೆ (ಪರಿಷ್ಕೃತ) ತಾತ್ಕಾಲಿಕ, ಮಹಾಯೋಜನೆ (ಪರಿಷ್ಕೃತ) ಅಂತಿಮ :

ಇಲಾಖೆಯು ಯೋಜನಾ ಪ್ರಾಧಿಕಾರಗಳಿಗೆ : ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಮಹಾಯೋಜನೆ ತಯಾರಿಸುವಲ್ಲಿ ಮತ್ತು ಜಾರಿಗೆ ತರುವ ಕಾರ್ಯದಲ್ಲಿ ತಾಂತ್ರಿಕ ನೆರವು ನೀಡುವುದನ್ನು ಮುಂದುವರಿಸಿಕೊಂಡು ಬಂದಿದೆ.

2017-18 ನೇ ಸಾಲಿನ ಅವಧಿಯಲ್ಲಿ ಈ ಕೆಳಕಂಡ ಮಹಾಯೋಜನೆಗಳನ್ನು ಸಿದ್ಧಪಡಿಸಿ ಸರ್ಕಾರದ ಅನುಮತಿ ಪಡೆಯುವಲ್ಲಿ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಅಗತ್ಯ ನೆರವು ನೀಡಿದೆ. ಹಾಗೂ ಸಂಬಂಧಪಟ್ಟ ಪ್ರಾಧಿಕಾರಗಳಿಂದ ಅನುಷ್ಠಾನಗೊಳಿಸಲು ಕ್ರಮ ಜರುಗಿಸಿದೆ.

### I. ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ:

| ಕ್ರ.ಸಂ | ಹೆಸರು | ಅನುಮೋದನೆಯಾದ ದಿನಾಂಕ |
|---|---|---|
| 1. | ಹೊನ್ನಾಳಿ | 07-03-2019 |
| 2. | ಹೊಳಲ್ಕೆರೆ | 26-02-2019 |
| 3. | ವಿಜಯಪುರ | 05-02-2019 |

### II. ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ :

| ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|
| ಚಿಕ್ಕನಾಯಕನಹಳ್ಳಿ | 18-01-2019 |
| ಮಾಲೂರು | 02-03-2019 |
| ಚನ್ನರಾಯಪಟ್ಟಣ | 01-04-2019 |
| ಮೂಡಬಿದ್ರೆ | 26-03-2019 |

**III.** ಸರ್ಕಾರದ ತಾತ್ಕಾಲಿಕ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ (ಪರಿಷ್ಕೃತ-I):

| ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|
| ಯಾವುದೂ ಇಲ್ಲ | |

**IV.** ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ (ಪರಿಷ್ಕೃತ-I):

| ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|
| ಚಿಕ್ಕಬಳ್ಳಾಪುರ | 09-01-2019 |
| ಮಧುಗಿರಿ | 08-03-2019 |

**V.** ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ (ಪ-1):

| ಹೆಸರು | ಪ್ರಸ್ತಾವನೆ ಸಲ್ಲಿಸಿರುವ ದಿನಾಂಕ |
|---|---|
| ಯಾವುದೂ ಇಲ್ಲ | |

**VI.** ಸರ್ಕಾರದಿಂದ ಅಂತಿಮ ಅನುಮೋದನೆಗೊಂಡಿರುವ ಮಹಾಯೋಜನೆ (ಪ-1):

| ಹೆಸರು | ಅನುಮೋದನೆಯಾದ ದಿನಾಂಕ |
|---|---|
| ಬಾಗಲಕೋಟೆ | 09-11-2018 |
| ಇಂಡಿ | 06-10-2018 |

**VII.** ಈ ಕೆಳಗಿನ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆಗಳನ್ನು ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.

| | | | | | |
|---|---|---|---|---|---|
| 1. | ತಾಳಿಕೋಟೆ | 17. | ಕೊಪ್ಪ | 33. | ಆಳಂದ |
| 2 | ಬಸವನಬಾಗೇವಾಡಿ | 18. | ಗುಂಡ್ಲುಪೇಟೆ | 34. | ಯಲಬುರ್ಗಾ |
| 3. | ಕಮತಗಿ | 19. | ಹಳಿಯಾಳ | 35. | STRR |
| 4. | ಚಿತ್ತಾಪುರ | 20. | ಬೆಳ್ತಂಗಡಿ | 36. | ಗ್ರೇಟರ್ ಬೆಂಗಳೂರು ಬಿಡದಿ ಸ್ಮಾರ್ಟ್ ಸಿಟಿ |
| 5. | ಹೊನ್ನಾವರ | 21. | ಕುಣಿಗಲ್ | 37. | ಟಿ. ನರಸೀಪುರ |
| 6. | ಹೊಸದುರ್ಗ | 22. | ಚಿಕ್ಕೋಡಿ | 38 | ಕಾಪು |
| 7. | ಶಿಡ್ಲಘಟ್ಟ | 23. | ಪಾವಗಡ | 39. | ಹಾನಗಲ್ |
| 8. | ಬೇಲೂರು-ಹಳೇಬೀಡು | 24. | ಔರಾದ | 40. | ಕಾರ್ಕಳ |
| 9. | ಸಿದ್ದಾಪುರ | 25. | ಕುಷ್ಟಗಿ | 41. | ಪಿರಿಯಾಪಟ್ಟಣ |
| 10. | ಶ್ರೀರಂಗಪಟ್ಟಣ | 26. | ಕಿತ್ತೂರು | 42. | ತುರುವೇಕೆರೆ |
| 11. | ಅರಕಲಗೂಡು | 27. | ರೋಣ | 43. | ಬಾಗೇಪಲ್ಲಿ |
| 12. | ಮೂಡಬಿದ್ರೆ | 28. | ನರಸಿಂಹರಾಜಪುರ | 44. | ಮಲೇಬೆನ್ನೂರು |
| 13. | ಕುಂದಾಪುರ | 29. | ಕೆರೂರು | 45. | ಕೊರಟಗೆರೆ |
| 14. | ಸುಳ್ಯ | 30. | ಬೀಳಗಿ | 46. | ಕುಂದಗೋಳ |
| 15. | ತೇರದಾಳ | 31. | ಹುನಗುಂದ | | |
| 16. | ಮೂಡಲಗಿ | 32. | ಶಿರಹಟ್ಟಿ | | |

124

## VIII. ಸರ್ಕಾರದ ಅಂತಿಮ ಅನುಮೋದನೆಗೆ ಸಲ್ಲಿಸಿರುವ ಮಹಾಯೋಜನೆ:

| | |
|---|---|
| ಚನ್ನಗಿರಿ | 27-09-2018 |

## IX. ಈ ಕೆಳಗಿನ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪರಿಷ್ಕೃತ-I) ನ್ನು ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.

| | | | |
|---|---|---|---|
| 1. | ಮಹಾಲಿಂಗಪುರ | 9. | ಮುಧೋಳ |
| 2. | ಕುಮಟಾ | 10. | ಶಹಾಪೂರ |
| 3. | ಮಳವಳ್ಳಿ | 11. | ಸಿರುಗುಪ್ಪ |
| 4. | ಮುದ್ದೇಬಿಹಾಳ | 12. | ಮಾನ್ವಿ |
| 5. | ನವಲಗುಂದ | 13. | ಸಿಂಧನೂರು |
| 6. | ಇಳಕಲ್ | 14. | ಪುತ್ತೂರು |
| 7. | ಭಟ್ಕಳ | 15. | ಜಗಳೂರು |
| 8. | ತಿಪಟೂರು | 16. | ಶಿರಾ |

## X. ಈ ಕೆಳಗಿನ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆ – (ಪರಿಷ್ಕೃತ-I) ನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.

| | |
|---|---|
| 1. | ಕೊಳ್ಳೇಗಾಲ |
| 2. | ಸವದತ್ತಿ |
| 3. | ಹುಮ್ನಾಬಾದ್ |

## XI. ಈ ಕೆಳಗಿನ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪರಿಷ್ಕೃತ-II) ನ್ನು ಸರ್ಕಾರದ ತಾತ್ಕಾಲಿಕ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ.

| | | | |
|---|---|---|---|
| 1. | ಚಾಮರಾಜನಗರ-ರಾಮಸಮುದ್ರ | 4. | ಗದಗ-ಬೆಟಗೇರಿ |
| 2. | ಮಂಡ್ಯ | 5. | ಉಡುಪಿ |
| 3. | ದಾವಣಗೆರೆ-ಹರಿಹರ | | |

**XII.** ಈ ಕೆಳಗಿನ ಸ್ಥಳೀಯ ಯೋಜನಾ ಪ್ರದೇಶಗಳ ಮಹಾಯೋಜನೆ (ಪ–2)ನ್ನು ಸರ್ಕಾರದ ಅಂತಿಮ ಅನುಮೋದನೆಗಾಗಿ ಸಲ್ಲಿಸಲು ಉದ್ದೇಶಿಸಲಾಗಿದ್ದು, ಯೋಜನೆಗಳ ತಯಾರಿಕೆ ಪ್ರಗತಿಯಲ್ಲಿದೆ

| |
|---|
| ಶಿರಸಿ |

**XIII.** ಸರ್ಕಾರದಿಂದ ತಾತ್ಕಾಲಿಕ ಅನುಮೋದನೆಗೊಂಡಿರುವ ಮಹಾಯೋಜನೆ (ಪ–II):

| | |
|---|---|
| ವಿಜಯಪುರ | 05–02–2019 |

**XIV.** ಸರ್ಕಾರದಿಂದ ಅಂತಿಮ ಅನುಮೋದನೆಗೊಂಡಿರುವ ಮಹಾಯೋಜನೆ (ಪ–II):

| | |
|---|---|
| ಹುಬ್ಬಳ್ಳಿ–ಧಾರವಾಡ | 08–03–2019 |

**XV.** ಅಮೃತ್ ಯೋಜನೆಯಡಿ ಈ ಕೆಳಕಂಡ ನಗರ/ಪಟ್ಟಣಗಳಿಗೆ (ಬೆಂಗಳೂರು ಹೊರತುಪಡಿಸಿ) GIS ಆಧಾರಿತ ಮಹಾಯೋಜನೆ ತಯಾರಿಕೆ ಪ್ರಗತಿಯಲ್ಲಿರುತ್ತದೆ.

| | | | |
|---|---|---|---|
| 1. | ಬಾದಾಮಿ | 14. | ಹೊಸಪೇಟೆ |
| 2. | ಬಾಗಲಕೋಟೆ | 15. | ಕಲಬುರಗಿ |
| 3. | ಬೆಳಗಾವಿ | 16. | ಕೋಲಾರ |
| 4. | ಬಳ್ಳಾರಿ | 17. | ಮಂಡ್ಯ |
| 5. | ಭದ್ರಾವತಿ | 18. | ಮಂಗಳೂರು |
| 6. | ಬೀದರ್ | 19. | ಮೈಸೂರು |
| 7. | ಚಿಕ್ಕಮಗಳೂರು | 20. | ರಾಯಚೂರು |
| 8. | ಚಿತ್ರದುರ್ಗ | 21. | ರಾಣೇಬೆನ್ನೂರು |
| 9 | ದಾವಣಗೆರೆ | 22. | ರಾಬರ್ಟ್‌ಸನ್ ಪೇಟೆ |
| 10. | ಧಾರವಾಡ | 23. | ಶಿವಮೊಗ್ಗ |
| 11. | ಗದಗ–ಬೆಟಗೇರಿ | 24. | ತುಮಕೂರು |
| 12. | ಗಂಗಾವತಿ | 25. | ಉಡುಪಿ |
| 13. | ಹಾಸನ | 26. | ವಿಜಯಪುರ |

122

**XVI. ಇಲಾಖೆಯಿಂದ ತತ್ವಾಧಾರಿತ ವಿಷಯಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವ ಕುರಿತು ವಿವರ ಈ ಕೆಳಕಂಡಂತೆ ಇರುತ್ತದೆ.**

| ಕ್ರ.ಸಂ. | ವಿವರ |
|---|---|
| 1. | Ease of Doing Business ನ ಉಪಕ್ರಮದಲ್ಲಿ ಕಟ್ಟಡ ನಕ್ಷೆ ಅನುಮೋದನೆ, ವಿನ್ಯಾಸ ನಕ್ಷೆ ಅನುಮೋದನೆ ಹಾಗೂ ಭೂ-ಉಪಯೋಗ ಬದಲಾವಣೆಯನ್ನು ಆನ್‌ಲೈನ್ ಮುಖಾಂತರ ನೀಡಲು ತಂತ್ರಾಂಶವನ್ನು ಅನುಷ್ಠಾನಗೊಳಿಸಲಾಗುತ್ತಿದೆ. LBPAS (Land and Buildign Plan Approval System) ರಲ್ಲಿ Auto Plan ತಂತ್ರಾಂಶವನ್ನು ಉಪಯೋಗಿಸಿಕೊಂಡು ನಕ್ಷೆಗಳನ್ನು ಸ್ವಯಂಚಾಲಿತವಾಗಿ ಪರಿಶೀಲಿಸಿ, ಆನ್‌ಲೈನ್ ಮುಖಾಂತರ ಅನುಮೋದನೆಯನ್ನು ಅಮೃತ್ ಯೋಜನೆಯಡಿ ಆಯ್ಕೆಯಾಗಿರುವ 26 ನಗರ/ಪಟ್ಟಣಗಳಲ್ಲಿ ನೀಡಲಾಗುತ್ತಿದೆ. ಭೂ-ಉಪಯೋಗ ಬದಲಾವಣೆ ಹಾಗೂ ವಿನ್ಯಾಸ ನಕ್ಷೆಗಳಿಗೆ ಆನ್‌ಲೈನ್ ಮುಖಾಂತರ ಅನುಮೋದನೆ ನೀಡಲು ಮಾಡ್ಯೂಲ್‌ಗಳನ್ನು ತಯಾರಿಸಿದ್ದು, ಪ್ರಾಯೋಗಿಕವಾಗಿ 06 ನಗರ/ಪಟ್ಟಣಗಳಲ್ಲಿ ಅನುಷ್ಠಾನಗೊಳಿಸುವ ಕಾರ್ಯ ಕೈಗೊಳ್ಳಲಾಗುತ್ತಿದ್ದು, ಮಾನ್ಯ ಮುಖ್ಯ ಮಂತ್ರಿಗಳು, ಕರ್ನಾಟಕ ಸರ್ಕಾರ ಇವರಿಂದ ಚಾಲನೆ ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ. |
| 2. | ಕೇಂದ್ರ ಸರ್ಕಾರದ ಪುರಸ್ಕೃತ ಯೋಜನೆಯಾದ "AMRUT" ಯೋಜನೆಯಡಿ ರಾಜ್ಯದ 26 ನಗರ/ಪಟ್ಟಣಗಳನ್ನು ಆಯ್ಕೆ ಮಾಡಲಾಗಿದ್ದು, ಸದರಿ 26 ನಗರ/ಪಟ್ಟಣಗಳಿಗೆ GIS ಆಧಾರಿತ ಮೂಲನಕ್ಷೆಯನ್ನು ತಯಾರಿಸಿ ಮಹಾಯೋಜನೆ ತಯಾರಿಕೆ ಸಂಬಂಧ ವಿವಿಧ ಹಂತಗಳ ಕಾರ್ಯಗಳು ಪ್ರಗತಿಯಲ್ಲಿದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ ಯೋಜನೆಗೆ ನೋಡಲ್ ಏಜೆನ್ಸಿ ಆಗಿರುತ್ತದೆ. ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯು ಸದರಿ 26 ನಗರ/ಪಟ್ಟಣಗಳಿಗೆ ಮೂಲನಕ್ಷೆಗಳನ್ನು ತಯಾರಿಸುವ ಸಂಬಂಧ ದಿನಾಂಕ:01-01-2018 ರಂದು KSRSAC ರವರೊಂದಿಗೆ ಒಪ್ಪಂದದ ಕರಾರು ಮಾಡಿಕೊಂಡಿದ್ದು, ಮೂಲನಕ್ಷೆ ತಯಾರಿಕೆ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಮುಂದುವರೆದು, ಸದರಿ 26 ನಗರ/ಪಟ್ಟಣಗಳ ಪೈಕಿ ಮೊದಲನೇ ಹಂತದಲ್ಲಿ 06 ನಗರಗಳಿಗೆ ಮಹಾಯೋಜನೆ ತಯಾರಿಕೆ ಕುರಿತು ಈಗಾಗಲೇ work order ನೀಡಲಾಗಿದ್ದು ಕೆಲಸ ಪ್ರಗತಿಯಲ್ಲಿರುತ್ತದೆ. ಉಳಿದ 20 ನಗರ/ಪಟ್ಟಣಗಳಿಗೆ ಮಹಾಯೋಜನೆ ತಯಾರಿಕೆ ಕುರಿತು e-tender ಕರೆಯಲಾಗಿದ್ದು, Tender Evaluation ಪ್ರಗತಿಯಲ್ಲಿರುತ್ತದೆ. |

**3.3. ಸ್ಥಳೀಯ ಸಂಸ್ಥೆಗಳು, ವಸತಿ ಇಲಾಖೆ, ನಗರಾಭಿವೃದ್ಧಿ ಇಲಾಖೆ, ಸರ್ಕಾರಿ/ ಅರೆ ಸರ್ಕಾರಿ ಸಂಸ್ಥೆಗಳು ಮತ್ತು ಇತರೆ ಇಲಾಖೆಗಳಿಗೆ ತಾಂತ್ರಿಕ ಅಭಿಪ್ರಾಯ ನೀಡುವುದು.**

1. ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಕರ್ನಾಟಕ ಗೃಹ ಮಂಡಳಿ, ಕರ್ನಾಟಕ ಕೈಗಾರಿಕೆ ಪ್ರದೇಶಾಭಿವೃದ್ಧಿ ಮಂಡಳಿ ಮತ್ತು ಇತರೆ ಅಭಿವೃದ್ಧಿ ಸಂಸ್ಥೆಗಳಿಗೆ ರೂಪರೇಖೆಗಳನ್ನು ಸಿದ್ದಪಡಿಸಲು ತಾಂತ್ರಿಕ ನೆರವು/ ಸಲಹೆಗಳನ್ನು ನೀಡುವುದನ್ನು ಇಲಾಖೆಯು ಮುಂದುವರಿಸಿಕೊಂಡು ಬಂದಿದೆ. ಸ್ಥಳೀಯ ಸಂಸ್ಥೆಗಳ ಯೋಜನೆಗಳನ್ನು, ಪುನರ್ವಸತಿ

ಯೋಜನೆಗಳನ್ನು ಮತ್ತು ನಿವೇಶನ ರಹಿತರಿಗೆ ಆಶ್ರಯ ಯೋಜನೆಯಡಿಯಲ್ಲಿ ತಯಾರಿಸುವ ರೂಪರೇಖೆಗಳನ್ನು ಸಿದ್ದಪಡಿಸಿಕೊಡಲಾಗಿದೆ.

2. ವ್ಯವಸಾಯ ಜಮೀನನ್ನು ವ್ಯವಸಾಯೇತರ ಉಪಯೋಗಕ್ಕಾಗಿ ಭೂ ಪರಿವರ್ತಿಸುವ ಪ್ರಕರಣಗಳಲ್ಲಿ ಇಲಾಖೆಯು ತಾಂತ್ರಿಕ ಅಭಿಪ್ರಾಯವನ್ನು ಕಂದಾಯ ಇಲಾಖೆಗೆ ನೀಡುತ್ತಿದ್ದು ಪ್ರಸ್ತುತ ಸಾಲಿನಲ್ಲಿ 1556 ಪ್ರಕರಣಗಳಲ್ಲಿ ಅಭಿಪ್ರಾಯ ನೀಡಲಾಗಿದೆ.

### 3.4. ರೂಪರೇಖಾ ನಕ್ಷೆಗಳು :

ಪ್ರಸ್ತುತ ಸಾಲಿನಲ್ಲಿ 915 ರೂಪರೇಖೆಗಳಿಗೆ ತಾಂತ್ರಿಕ ಅನುಮೋದನೆ ನೀಡಿದ್ದು, ಸಂಬಂಧಪಟ್ಟ ಸ್ಥಳೀಯ ಸಂಸ್ಥೆಗಳಿಗೆ ಅನುಷ್ಠಾನಗೊಳಿಸಲು ಕಳುಹಿಸಲಾಗಿದೆ.

### 3.5. ಇಲಾಖೆ ಯೋಜನೆಗಳು (2018-19):

2017-18ನೇ ಸಾಲಿಗೆ ರೂ.1246.00 ಲಕ್ಷ ಅನುದಾನವನ್ನು ಇಲಾಖೆಯ ಅಧಿಕಾರಿ ಮತ್ತು ಸಿಬ್ಬಂದಿಗಳ ವೇತನ ಮತ್ತು ಭತ್ಯೆಗಳಿಗೆ ವೆಚ್ಚ ಭರಿಸಲು ಸರ್ಕಾರದಿಂದ ಅನುದಾನ ಒದಗಿಸಲಾಗಿತ್ತು. ಅದರಲ್ಲಿ ಮಾರ್ಚ್ 2017ರ ಅಂತ್ಯದವರೆಗೆ ರೂ.1111.28 ಲಕ್ಷ ವೆಚ್ಚ ಭರಿಸಲಾಗಿದೆ.

**ಲೆಕ್ಕ ಶೀರ್ಷಿಕೆ:**

1. 2217-05-001-1-01 – ವೇತನ ಮತ್ತು ಭತ್ಯೆಗಳು
2. 4217-60-800-4-02-386 – ಇಲಾಖೆಯ ಶಾಖಾ ಕಛೇರಿಗಳಿಗಾಗಿ ನಿವೇಶನ ಖರೀದಿ ಮತ್ತು ಕಟ್ಟಡಗಳ ನಿರ್ಮಾಣ
3. 2217-05-01-1-11-059 – ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ ಮತ್ತು ಹೊಸ ಹುದ್ದೆಗಳ ಸೃಜನೆ–ತರಬೇತಿ ಉದ್ದೇಶಕ್ಕಾಗಿ

| ಯೋಜನೆ | ಪರಿಷ್ಕೃತ ಅಂದಾಜು 2016-17 | | ಆಯವ್ಯಯ ಅಂದಾಜು 2017-18 | | ಆಯವ್ಯಯ ಅಂದಾಜು 2018-19 | |
|---|---|---|---|---|---|---|
| | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ |
| 1 | 2 | 3 | 4 | 5 | 6 | 7 |
| 1. | 1246.00 | – | 2504.00 | – | 1892.00 | – |
| 2. | 100.00 | – | 100.00 | – | 100.00 | – |
| 3. | 100.00 | – | 100.00 | – | 100.00 | – |

ವೆಚ್ಚ (ರೂ. ಲಕ್ಷಗಳಲ್ಲಿ)

(120)

| ಯೋಜನೆ | ಪರಿಷ್ಕೃತ ಅಂದಾಜು 2016–17 | | 2017–18ನೇ ಸಾಲಿನ ವೆಚ್ಚ | | 2018–19ನೇ ಸಾಲಿಗೆ ಬಿಡುಗಡೆ ಮಾಡಿರುವ ಅನುದಾನ | 2018–19ನೇ ಸಾಲಿನ ವೆಚ್ಚ | |
|---|---|---|---|---|---|---|---|
| | ಬಂಡವಾಳ | ರಾಜಸ್ವ | ಬಂಡವಾಳ | ರಾಜಸ್ವ | | ಬಂಡವಾಳ | ರಾಜಸ್ವ |
| 1 | 2 | 3 | 4 | 5 | 6 | 7 | 8 |
| 1. | 1111.28 | 96.82 | 2004.00 | 124.40 | 1892.00 | 1896.17 | 128.02 |
| 2. | 10.29 | | 100.00 | | 100.00 | 28.31 | |
| 3. | 79.99 | | 100.00 | | 100.00 | 0.46 | |

**2016–17:**

1) "ಯೋಜನೆ" ಲೆಕ್ಕ ಶೀರ್ಷಿಕೆ –2217–05–001–1–11–059" ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ, ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು ರೂ. 100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿತ್ತು. ಅದರಲ್ಲಿ ರೂ.10.27 ವೆಚ್ಚ ಭರಿಸಲಾಗಿದ್ದು, ಉಳಿಕೆ ರೂ.89.73 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2) "ಯೋಜನೆ" ಲೆಕ್ಕ ಶೀರ್ಷಿಕೆ –4217–60–800–4–02–386" – ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ–ಡಿ.ಎಂ.ಇ. ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.79.99 ಲಕ್ಷ ಕಛೇರಿ ಕಟ್ಟಡ ನಿರ್ಮಾಕ್ಕಾಗಿ ಸೈಟ್ ಅನ್ನು ಖರೀದಿಗಾಗಿ ಧಾರವಾಡ, ಬೆಳಗಾವಿ ಮತ್ತು ಯಾದಗಿರಿಗಳಿಗೆ ವೆಚ್ಚ ಭರಿಸಲಾಗಿದ್ದು, ಉಳಿಕೆ ರೂ.20.00 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

**2017–18:**

1) ಲೆಕ್ಕ ಶೀರ್ಷಿಕೆ –2217–05–001–1–11–059" ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ ಹಾಗೂ ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು ರೂ.100.00 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅದರಲ್ಲಿ ರೂ.87.76 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ. 12.24 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2) ಲೆಕ್ಕ ಶೀರ್ಷಿಕೆ –4217–60–800–4–02–386"– ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ–ಡಿ.ಎಂ.ಇ. ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.46.94 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ.53.06 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2018–19:

1) ಲೆಕ್ಕ ಶೀರ್ಷಿಕೆ 2217–05–001–1–11–059" ಆಡಳಿತಾತ್ಮಕ ವೆಚ್ಚ, ಸಿಬ್ಬಂದಿ ವೆಚ್ಚ ಹಾಗೂ ತರಬೇತಿ ಉದ್ದೇಶಕ್ಕಾಗಿ ಹಾಗೂ ಇತರೆ ವೆಚ್ಚಗಳು ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.28.31 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ. 71.69 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

2) ಲೆಕ್ಕ ಶೀರ್ಷಿಕೆ 4217–60–800–4–02–386" ಜಿಲ್ಲಾ ಮಟ್ಟದಲ್ಲಿ ಕಛೇರಿ ಕಟ್ಟಡಗಳ ನಿರ್ಮಾಣ– ಡಿ.ಎಂ.ಇ. ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗಿದ್ದು, ಅದರಲ್ಲಿ ರೂ.0.46 ಲಕ್ಷಗಳ ಅನುದಾನವನ್ನು ಉಪಯೋಗಿಸಿಕೊಂಡು ಉಳಿಕೆ ರೂ.99.54 ಲಕ್ಷಗಳನ್ನು ಸರ್ಕಾರಕ್ಕೆ ಅಧ್ಯರ್ಪಿಸಲಾಗಿದೆ.

**<u>ಭೌತಿಕ ಸಾಧನೆ:</u>**

**2018–19ನೇ ಸಾಲಿನಲ್ಲಿ (ಮಾರ್ಚ್ 2019ರ ಅಂತ್ಯದವರೆಗೆ) ಪ್ರಮುಖ ಲೆಕ್ಕ ಶೋಧನೆಯಲ್ಲಿನ ವೀಕ್ಷಣೆ (ಪ್ಯಾರ) ಪರಿವೀಕ್ಷಣೆಯ ಕಂಡಿಕೆಗಳು ( ಲೆಕ್ಕ ಪರಿಶೋಧನೆ / ಪರಿವೀಕ್ಷಣೆಯ ದಿನಾಂಕ ಮತ್ತು ವರದಿಯ ಉಲ್ಲೇಖ ಸಂಸ್ಥೆಯನ್ನು ನಮೂದಿಸಿ) ಲೆಕ್ಕ ಪರಿಶೋಧನೆ / ಪರಿವೀಕ್ಷಣೆಯು ಆಗದಿದ್ದಲ್ಲಿ ನಮೂದಿಸಿ)**

| ಕ್ರಮ ಸಂಖ್ಯೆ | ಕಛೇರಿಯ ಹೆಸರು | ಲೆಕ್ಕ ಪರಿಶೋಧನೆಯ ಅವಧಿ | ಪರಿವೀಕ್ಷಣೆಯ ಬಾಕಿ ಇರುವ ಕಂಡಿಕೆಗಳು |
|---|---|---|---|
| 1. | ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರ ಕಛೇರಿ, ಬೆಂಗಳೂರು. | 2009–10<br>2010–11<br>2011–12<br>2012–13<br>2013–16 | 01<br>02<br>01<br>02<br>04 |
| | **ಒಟ್ಟು** | | 13 |

ಮೇಲ್ಕಂಡ ಮಹಾಲೇಖಪಾಲರು, ಇವರು ಲೆಕ್ಕ ಪರಿಶೋಧನೆಯಲ್ಲಿ ಇಲಾಖೆಯ ಬಾಕಿ ಇರುವ ಆಕ್ಷೇಪಣೆಗಳಿಗೆ ಶೀಘ್ರ ಇತ್ಯರ್ಥಕ್ಕಾಗಿ ಸೂಕ್ತ ಉತ್ತರಗಳನ್ನು ಈಗಾಗಲೇ ಈ ಕಛೇರಿಯ ದಿ:30–10–2017 ಪತ್ರದಲ್ಲಿ ಮಹಾಲೇಖಪಾಲರು, ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ.

**<u>ಮುಂಗಡ ಪತ್ರ ಪ್ರಸ್ತಾವನೆ (2019–20)</u>**

2019–20ನೇ ಸಾಲಿನ ಲೆಕ್ಕ ಶೀರ್ಷಿಕೆ 2217–05–001–1–01 ರಡಿಯಲ್ಲಿ ರೂ.2223.00 ಲಕ್ಷ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿದೆ.

- ಲೆಕ್ಕ ಶೀರ್ಷಿಕೆ 2217–05–001–1–11–059 ರಡಿಯಲ್ಲಿ ರೂ.100.00 ಲಕ್ಷ ಹಾಗೂ 4217–60–800–4–02–386 ರಡಿಯಲ್ಲಿ ರೂ.100.00 ಲಕ್ಷ ಅನುದಾನವನ್ನು ಸರ್ಕಾರದಿಂದ ಒದಗಿಸಲಾಗಿದೆ.

(118)

### 3.6 ಎ) ನಗರ ನಕ್ಷೆ ಕೋಶಃ

ದಿನಾಂಕ 31.12.2016 ರವರೆಗೂ ನಗರ ನಕ್ಷೆ ಕೋಶವು ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿದ್ದು, ಸದ್ಯಕ್ಕೆ, ಸರ್ಕಾರದ ಆದೇಶ ಸಂಖ್ಯೆ ನಅಇ 14 ಟಿ.ಎಂಎಸ್, 2017, ಬೆಂಗಳೂರು, ದಿನಾಂಕ 14.3.2017 ರನ್ವಯ ದಿನಾಂಕ 1.1.2017 ರಿಂದ ಪೌರಾಡಳಿತ ನಿರ್ದೇಶನಾಲಯದ ಕರ್ನಾಟಕ ಮುನಿಸಿಪಲ್ ಡಾಟಾ ಸೊಸೈಟಿಯಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.

ಈ ಇಲಾಖೆಯಿಂದ, ಕೆ.ಎಂ.ಆರ್.ಪಿ ಹಾಗೂ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿಯಲ್ಲಿ, ನಗರ ನಕ್ಷೆ ಕೋಶದ ಮೇಲ್ವಿಚಾರಣೆಯಲ್ಲಿ, ಹೊರಗುತ್ತಿಗೆ ಮೂಲಕ ಕೈಗೊಳ್ಳಲಾಗಿದ್ದ ಮೂಲನಕ್ಷೆ ತಯಾರಿಕಾ ಕಾರ್ಯಗಳು 31.12.2016 ರೊಳಗೆ ಮುಕ್ತಾಯಗೊಂಡಿರುತ್ತವೆ. ಈ ಯೋಜನೆಯಡಿ ತಯಾರಿಸಲಾದ ನಕ್ಷೆಗಳನ್ನು ಕೇಂದ್ರ ಸರ್ಕಾರದ ರಕ್ಷಣಾ ಸಚಿವಾಲಯದಿಂದ ಕ್ಲಿಯರೆನ್ಸ್ ಪಡೆದು, ಸಂಬಂದಿಸಿದ ಯೋಜನಾ/ನಗರಾಭಿವೃದ್ಧಿ ಪ್ರಾಧಿಕಾರಗಳಿಗೆ ಹಸ್ತಾಂತರಿಸಲಾಗಿದೆ.

### 5. ಮಾನವ ಸಂಪನ್ಮೂಲ ಹಾಗೂ ಆಡಳಿತ ವರದಿ

5ಎ. 1 ಅನುಮೋದಿತ ಹುದ್ದೆಗಳು: ಭರ್ತಿಯಾದ ಹುದ್ದೆಗಳ ವಿವರ ಈ ರೀತಿ ಇರುತ್ತದೆ.

| ವಿಂಗಡಿತ ಗುಂಪು | ಅನುಮೋದಿತವಾಗಿರುವುವು | ಭರ್ತಿಯಾಗಿರುವುವು |
|---|---|---|
| ಗುಂಪು ಎ | 219 | 145 |
| ಗುಂಪು ಬಿ | 148 | 99 |
| ಗುಂಪು ಸಿ | 377 | 188 |
| ಗುಂಪು ಡಿ | 92 | 28 |
| **ಒಟ್ಟು** | **836** | **460** |

**5ಎ 2. ಲಿಂಗ ವಿವರಗಳು:**

| ವಿಂಗಡಿತ ಗುಂಪು | ಪುರುಷರು | ಸ್ತ್ರೀಯರು |
|---|---|---|
| ಗುಂಪು ಎ | 119 | 26 |
| ಗುಂಪು ಬಿ | 61 | 38 |
| ಗುಂಪು ಸಿ | 132 | 56 |
| ಗುಂಪು ಡಿ | 19 | 09 |
| **ಒಟ್ಟು** | **331** | **129** |

**5ಎ 3 ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಪ್ರಾತಿನಿಧ್ಯತೆ (ಗುಂಪುವಾರು)**

| ವಿಂಗಡಿತ ಗುಂಪು | ಪರಿಶಿಷ್ಟ ಜಾತಿ | ಪರಿಶಿಷ್ಟ ವರ್ಗ |
|---|---|---|
| ಗುಂಪು ಎ | 26 | 07 |
| ಗುಂಪು ಬಿ | 13 | 03 |
| ಗುಂಪು ಸಿ | 18 | 08 |
| ಗುಂಪು ಡಿ | 04 | 01 |
| **ಒಟ್ಟು** | **61** | **19** |

5ಬಿ. ದಿನಾಂಕ:31–03–2019 ರಲ್ಲಿದ್ದಂತೆ ಖಾಲಿ ಹುದ್ದೆಗಳು ಹಾಗೂ ಮುಂದಿನ ವರ್ಷದಲ್ಲಿ ನಿವೃತ್ತಿಯಾಗಲಿರುವ ಮಾಹಿತಿಯ ತಖ್ತೆ:

| ಕ್ರಮ ಸಂಖ್ಯೆ | ಹುದ್ದೆಗಳ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | | ನಿವೃತ್ತಿಯಾಗಲಿರುವವರ ಸಂಖ್ಯೆ. | |
|---|---|---|---|---|---|
| 1. | ನಿರ್ದೇಶಕರು | 1 | 2 | 0 | 0 |
| 2. | ಹೆಚ್ಚುವರಿ ನಿರ್ದೇಶಕರು | 0 | 2 | 0 | 0 |
| 3. | ಜಂಟಿ ನಿರ್ದೇಶಕರು | 2 | 9 | 0 | 1 |
| 4. | ಉಪ ನಿರ್ದೇಶಕರು | 0 | 7 | 0 | 0 |
| 5. | ಸಹಾಯಕ ನಿರ್ದೇಶಕರು | 6 | 45 | 0 | 0 |
| 6. | ನಗರ ಯೋಜಕರು | 3 | 43 | 0 | 1 |
| 7. | ಸಹಾಯಕ ನಗರ ಯೋಜಕರು | 15 | 83 | 0 | 0 |
| 8. | ಮಾಡಲ್ ಮೇಕರ್ | 1 | 0 | 0 | 0 |
| 9. | ಪತ್ರಾಂಕಿತ ವ್ಯವಸ್ಥಾಪಕರು | 1 | 0 | 0 | 0 |
| 10. | ವ್ಯವಸ್ಥಾಪಕರು | 1 | 0 | 0 | 0 |
| 11. | ಲೆಕ್ಕಾಧೀಕ್ಷಕರು | 1 | 0 | 0 | 0 |
| 12. | ಅಧೀಕ್ಷಕರು | 4 | 0 | 1 | 0 |
| 13. | ಪ್ರಥಮ ದರ್ಜೆ ಸಹಾಯಕರು | 18 | 0 | 0 | 0 |
| 14. | ಶೀಘ್ರಲಿಪಿಗಾರರು | 1 | 8 | 0 | 0 |
| 15. | ದ್ವಿತೀಯ ದರ್ಜೆ ಸಹಾಯಕರು | 2 | 0 | 0 | 0 |
| 16. | ಛಾಯಾ ಮುದ್ರಕರು | 3 | 0 | 0 | 0 |
| 17. | ಕಂಪ್ಯೂಟರ್ ಆಪರೇಟರ್ | 1 | 0 | 0 | 0 |
| 18. | ಹಿರಿಯ ಬೆರಳಚ್ಚುಗಾರರು | 2 | 0 | 1 | 0 |
| 19. | ಬೆರಳಚ್ಚುಗಾರರು | 35 | 0 | 1 | 0 |
| 20. | ಹಿರಿಯ ವಾಹನ ಚಾಲಕರು | 1 | 0 | 1 | 0 |
| 21. | ವಾಹನ ಚಾಲಕರು | 15 | 0 | 1 | 0 |
| 22. | ಅನುಚಾರಕರು | 5 | 0 | 0 | 0 |
| 23. | ಸೇವಕರು | 59 | 0 | 0 | 0 |
| ಒಟ್ಟು | | 177 | 199 | 5 | 2 |

5ಸಿ. ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳ ಪೈಕಿ ಈ ಕೆಳಕಂಡಂತೆ ಸೇವೆಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾಗಿದೆ.

| ಕ್ರಮ ಸಂಖ್ಯೆ | ಖಾಲಿ ಇರುವ ಹುದ್ದೆಗಳು | ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲಾದ ಹುದ್ದೆಗಳ ಸಂಖ್ಯೆ |
|---|---|---|
| 1. | ವಾಹನ ಚಾಲಕರು | 04 |
| 2. | ಬೆರಳಚ್ಚುಗಾರರು | 32 |
| 3. | ಗ್ರೂಪ್ – ಡಿ | 25 |

116

5ಡಿಮತ್ತು 5ಎಫ್ ಅನ್ವಯಿಸುವುದಿಲ್ಲ.

5ಜಿ ಇಲಾಖಾ ಮುಖ್ಯಸ್ಥರ ಪ್ರವಾಸ: 2018 ಮೇ ರಿಂದ ಮಾರ್ಚ್ 2019

ಶ್ರೀ ಹೆಚ್.ಎಂ.ಮಲ್ಲಿಕಾರ್ಜುನ ಸ್ವಾಮಿ, ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು ದಿ: ರಿಂದ

| | | |
|---|---|---|
| 1. | ಮಂಗಳೂರು | ದಿ: 28-05-2018 ರಿಂದ ದಿ:29-05-2018 |
| 2. | ಮಡಿಕೇರಿ | ದಿ:20-10-2018 |
| 3. | ಹುಬ್ಬಳ್ಳಿ, ಬೆಳಗಾವಿ. | ದಿ:10-12-2018 ರಿಂದ ದಿ:21-12-2018 |
| 4. | ಚಿತ್ರದುರ್ಗ, ದಾವಣಗೆರೆ, ಧಾರವಾಡ, ಹುಬ್ಬಳ್ಳಿ ಮತ್ತು ಬೆಳಗಾವಿ. | ದಿ:17-12-2018 ರಿಂದ ದಿ: 21-12-2018 |
| 5. | ಮೈಸೂರು | ದಿ:02-01-2019 ರಿಂದ ದಿ:03-01-2019 |
| 6. | ಮೈಸೂರು | ದಿ:18-03-2019 ರಿಂದ ದಿ:19-03-2019 |
| 7. | ಧಾರವಾಡ-ಹುಬ್ಬಳ್ಳಿ | ದಿ:21-03-2019 ರಿಂದ ದಿ:22-03-2019 |

**6 ಕಾರ್ಯನಿರ್ವಹಣಾ ಕ್ಷಮತೆ:**

**6.1 ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ ಸ್ವೀಕರಿಸಿರುವ ಅರ್ಜಿಗಳ ವಿವರ:**

2017-18ನೇ ಸಾಲಿನ ಮಾಹಿತಿ ಹಕ್ಕು ಅಧಿನಿಯಮದಡಿಯಲ್ಲಿ 646 ಅರ್ಜಿಗಳನ್ನು ಸ್ವೀಕರಿಸಲಾಗಿದ್ದು, 636 ಅರ್ಜಿಗಳನ್ನು ಇತ್ಯಾರ್ಥವಾಗಿರುತ್ತದೆ.

**7.2 ನ್ಯಾಯಾಲಯದ ಪ್ರಕರಣ:**

**ತಾಂತ್ರಿಕ ಶಾಖೆ**: ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶನಾಲಯದಲ್ಲಿ ನಿರ್ದೇಶಕರನ್ನು ಪ್ರತಿವಾದಿಯನ್ನಾಗಿ 10 ಪ್ರಕರಣಗಳು ನ್ಯಾಯಾಲಯದಲ್ಲಿ ದಾಖಲಾಗಿದ್ದು, ಸದರಿ ಪ್ರಕರಣದ ಪೈಕಿ 06 ಪ್ರಕರಣಗಳು ನ್ಯಾಯಾಲಯಗಳಿಂದ ವಿಲೇವಾರಿಗೊಳಿಸಲಾಗಿರುತ್ತದೆ. ಉಳಿದ 04 ಪ್ರಕರಣಗಳಿಗೆ ಕಂಡಿಕೆವಾರು ಉತ್ತರಗಳನ್ನು ಸರ್ಕಾರಿ ವಕೀಲರಿಗೆ ನ್ಯಾಯಾಲಯಕ್ಕೆ ಸಲ್ಲಿಸುವ ಸಂಬಂಧ ಕಳುಹಿಸಿಕೊಡಲಾಗುತ್ತದೆ. ನಿರ್ದೇಶನಾಲಯದಲ್ಲಿ ಯಾವುದೇ ನ್ಯಾಯಾಲಯ ಪ್ರಕರಣಗಳು ವಿಲೇವಾರಿಗೆ ಬಾಕಿ ಇರುವುದಿಲ್ಲ.

**7.3 ಅಧಿವೇಶನದ ಪ್ರಶ್ನೆಗಳು:**

2018-19 ನೇ ಸಾಲಿನಲ್ಲಿ ನಡೆದ ವಿಧಾನಸಭೆ /ವಿಧಾನ ಪರಿಷತ್ ಚುಕ್ಕೆ ಗುರುತಿನ ಹಾಗೂ ಚುಕ್ಕೆ ಗುರುತಿಲ್ಲದ 107 ಪ್ರಶ್ನೆಗಳನ್ನು ಸ್ವೀಕರಿಸಿದ್ದು ಸದರಿ ಪ್ರಶ್ನೆಗಳಿಗೆ ಉತ್ತರಗಳನ್ನು ನೀಡಲಾಗಿದೆ.

20/5/19

ನಗರ ಮತ್ತು ಗ್ರಾಮಾಂತರ ಯೋಜನಾ ನಿರ್ದೇಶಕರು

20/5/19

o/c